ಎಸ್.ಎಸ್. ಎಸ್.ಟಿ.ಎಫ್. ಡಿಜಿಟಲ್ ಗ್ರೂಪ್

## 10ನೇ ತರಗತಿ ಸಮಾಜ ವಿಜ್ಞಾನ

# ಅಭಯ

## ಮಾದರಿ ಪ್ರಶ್ನೆ ಪತ್ರಿಕೆಗಳು



2022-23



ಮಹಾದೇವಪ್ಪ ಕುಂದರಗಿ
ಸರ್ಕಾರಿ ಪ್ರೌಢ ಶಾಲೆ ಆವತಿ, ಚಿಕ್ಕಮಗಳೂರು

## ಮಾದರಿ ಪ್ರಶ್ನೆ ಪತ್ರಿಕೆ – 01

**ತರಗತಿ: 10** **2022-23** **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಅವಧಿ: 3ಗಂಟೆ 15ನಿಮಿಷ**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8 X 1 =8**

**1.** ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ

A) ಮೈಸೂರು B) ಹೈದರಾಬಾದ್ C) ಔದ್ D) ಆರ್ಕಾಟ್

**2.** ಸ್ವಾಮಿ ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆ ಮಾಡಲು ಕಾರಣ

A) ವೇದಗಳಲ್ಲಿ ನಾಲ್ಕು ವಿಧಗಳಿವೆ. B) ವೇದಗಳು ಭಾರತೀಯರಿಗೇ ಭಾರತ ಎಂದು ಘೋಷಿಸಿವೆ..

C) ವೇದಗಳು ಶುದ್ಧಿ ಚಳುವಳಿಗೆ ಪ್ರೇರಣೆ ನೀಡಿವೆ. D) ವೇದಗಳು ಸತ್ಯ ಮತ್ತು ಜ್ಞಾನದ ಮೂಲವಾಗಿವೆ.

**3.** ಯುನಿಸೆಫ್ ಸಂಸ್ಥೆಯ ಶುಭಾಶಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಈ ಉದ್ದೇಶಕ್ಕಾಗಿ ಬಳಸುತ್ತಿದೆ.

A) ಮಕ್ಕಳ ಯೋಗಕ್ಷೇಮಕ್ಕಾಗಿ B) ಮಹಿಳೆಯರ ಯೋಗಕ್ಷೇಮಕ್ಕಾಗಿ

C) ಕಾರ್ಮಿಕರ ಕಲ್ಯಾಣಕ್ಕಾಗಿ D) ಆರ್ಥಿಕವಾಗಿ ಹಿಂದುಳಿದ ಜನರ ಕಲ್ಯಾಣಕ್ಕಾಗಿ

**4.** ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಸ್ಥಿತಿ

A) ಬಡತನ B) ವಿಶೇಷ ಪರಿಣತಿ C) ಶ್ರಮ ವಿಭಜನೆ D) ನಿರುದ್ಯೋಗ

**5.** ಕೈಗಾ ಅಣುಸ್ಥಾವರ ವಿರೋಧಿ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು

A) ಮೇಧಾ ಪಾಟ್ಕರ್ B) ಸುಂದರಲಾಲ್ ಬಹುಗುಣ

C) ಶಿವರಾಂ ಕಾರಂತ D) ಬಾಬಾ ಆಮ್ಟೆ

**6.** ಮುಂಬಯಿ ಬಂದರಿನ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡ ಕ್ರಮ

A) ಹಾಲ್ದಿಯಾ ಎಂಬ ಕೃತಕ ಬಂದರನ್ನು ನಿರ್ಮಿಸಿತು.

B) ಮುಂಬಯಿ ಬಂದರನ್ನು ಮತ್ತಷ್ಟು ಬಲಪಡಿಸಿತು.

C) ನವಾಶೇವಾ ಎಂಬ ಅತ್ಯಾಧುನಿ ಸೌಲಭ್ಯಗಳ ಬಂದರನ್ನು ನಿರ್ಮಿಸಿತು.

D) ಹೆಚ್ಚು ಸರಕುಗಳು ಮುಂಬಯಿ ಬಂದರಿಗೆ ಬರದಂತೆ ನೋಡಿಕೊಂಡಿತು.

**7.** ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಕಾರಣವಾದ ಸಂವಿಧಾನದ ತಿದ್ದುಪಡಿ

A) 42ನೇ ತಿದ್ದುಪಡಿ B) 73ನೇ ತಿದ್ದುಪಡಿ C) 74ನೇ ತಿದ್ದುಪಡಿ D) 86ನೇ ತಿದ್ದುಪಡಿ

**8.** ವ್ಯಕ್ತಿಯೊಬ್ಬನು ಭವಿಷ್ಯತ್ತಿನಲ್ಲಿ ತನ್ನ ಮಕ್ಕಳ ವಿವಾಹ ಮಾಡಲು ಪ್ರತಿ ತಿಂಗಳು ನಿಯಮಿತವಾಗಿ ಉಳಿತಾಯ ಮಾಡಲು ಈ ಬ್ಯಾಂಕ್ ಖಾತೆಯನ್ನು ತೆರೆಯಬೇಕು.

A) ಉಳಿತಾಯ ಖಾತೆ B) ಚಾಲ್ತಿ ಖಾತೆ

C) ಆವರ್ತ ಠೇವಣಿ ಖಾತೆ D) ನಿಶ್ಚಿತ ಠೇವಣಿ ಖಾತೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 X 1 =8**

**9.** ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಲು ಕಾರಣವೇನು?

**10.** ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು?

**11.** 26/11 ರ ಮುಂಬೈನ ತಾಜ್ ಹೋಟೆಲ್ ಮೇಲಿನ ಭಯೋತ್ಪಾದಕರ ದಾಳಿಯು ಯಾವ ರಾಷ್ಟ್ರಗಳ ಸಂಬಂಧಕ್ಕೆ ಧಕ್ಕೆ ತಂದಿದೆ?

**12.** ವಿಶೇಷ ಪರಿಣತಿ ಎಂದರೇನು?

**13.** ಗಂಗಾನದಿ ಮುಖಜಭೂಮಿಯನ್ನು ಸುಂದರಬನ್ ಎಂದು ಕರೆಯಲು ಕಾರಣವೇನು?

**14.** ಮುಂಬೈಯನ್ನು 'ಭಾರತದ ಮ್ಯಾಂಚೆಸ್ಟರ್' ಎಂದು ಏಕೆ ಕರೆಯುತ್ತಾರೆ?

**15.** 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ?

**16.** ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಳಿಯ ಅಧ್ಯಕ್ಷರು ಯಾರಾಗಿರುತ್ತಾರೆ?



SSLC DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** **8 X 2 =16**

**17.** ದ್ವಿ ಪ್ರಭುತ್ವ ಪದ್ಧತಿಯನ್ನು ವಿವರಿಸಿ.

**18.** ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?

**19.** ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?

**ಅಥವಾ**

ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳಾವುವು?

**20.** ಉತ್ತರ ಪ್ರದೇಶದ ಜನರು ಚಿಪ್ಕೋ ಚಳುವಳಿಯನ್ನು ಏಕೆ ಆರಂಭಿಸಿದರು?

**ಅಥವಾ**

ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು?

**21.** ಪೂರ್ವ ಮತ್ತು ಪಶ್ಚಿಮ ಕರಾವಳಿಗಳ ನಡುವಿನ ವ್ಯತ್ಯಾಸಗಳೇನು?

**22.** ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ಕೈಗೊಳ್ಳಬಹುದಾದ ಪರಿಹಾರೋಪಾಯಗಳೇನು?

**23.** ಕೊರತೆ ಹಣಕಾಸಿನ ನಾಲ್ಕು ವಿಧಗಳಾವುವು?

**24.** ಬಳಕೆದಾರರ ಶೋಷಣೆಗೆ ಕಾರಣಗಳೇನು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** **9 X 3 =27**

**25.** ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳೇನು?

**26.** ಭಾರತೀಯ ಸಮಾಜ ಸುಧಾರಣೆಗೆ ಬ್ರಹ್ಮ ಸಮಾಜವು ಹೇಗೆ ಪ್ರೇರಣೆ ನೀಡಿತು?

**ಅಥವಾ**

1857ರ ದಂಗೆಗೆ ರಾಜಕೀಯ ಅಂಶಗಳು ಹೇಗೆ ದಾರಿಯಾದವು?

**27.** ಮೊದಲನೇ ಮಹಾಯುದ್ಧದ ಪರಿಣಾಮಗಳೇನು?

**28.** ವಿಶ್ವಸಂಸ್ಥೆಯು ಮಹತ್ತರವಾದ ಧ್ಯೇಯೋದ್ದೇಶಗಳನ್ನು ಹೊಂದಿದೆ. ಸಮರ್ಥಿಸಿ.

**29.** ಅಸ್ಪೃಶ್ಯತೆಯ ನಿವಾರಣೆಗೆ ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? ವಿವರಿಸಿ.

**30.** ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

**ಅಥವಾ**

ಮಣ್ಣಿನ ಸವೆತವನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ.

**31.** ಖಾರೀಫ್ ಬೇಸಾಯವು ರಬಿ ಬೇಸಾಯಕ್ಕಿಂತ ಭಿನ್ನವಾಗಿದೆ. ಹೇಗೆ?

**32.** ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ತಿಳಿಸಿ.

**ಅಥವಾ**

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

**33.** ಅಂಚೆ ಕಛೇರಿಗಳು ಹಣಕಾಸಿನ ಸೇವೆಗಳನ್ನು ಒದಗಿಸುತ್ತಿವೆ. ಸಮರ್ಥಿಸಿ.

**ಅಥವಾ**

ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಸ್ಪಷ್ಟೀಕರಿಸಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** **4 X 4 =16**

**34.** ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿ ಮಾಡಿ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಸಾಧನೆಗಳನ್ನು ವಿವರಿಸಿ.

**35.** ಡಾ. ಬಿ.ಆರ್.ಅಂಬೇಡ್ಕರ್‌ರವರ ಕೊಡುಗೆಗಳನ್ನು ವಿವರಿಸಿ.

**36.** 'ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಬದ್ಧವಾಗಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.

**37.** ಪ್ರವಾಹಗಳು ಉಂಟಾಗಲು ನೈಸರ್ಗಿಕ ಮತ್ತು ಮಾನವ ಕೃತ್ಯಗಳು ಹೇಗೆ ಕಾರಣವಾಗಿವೆ?

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

**a)** ಕೋರಮಂಡಲ ತೀರ **b)** ಭಾರತದ ಹೆಬ್ಬಾಗಿಲು

**c)** ನರ್ಮದಾ ನದಿ **d)** ವಿಶಾಖಪಟ್ಟಣ



SS TF DIGITAL GROUP

## ಮಾದರಿ ಪ್ರಶ್ನೆ ಪತ್ರಿಕೆ – 02

**ತರಗತಿ: 10** **2022-23** **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಅವಧಿ: 3ಗಂಟೆ 15ನಿಮಿಷ**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8 X 1 =8**

1. ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವ ಮನೆಮಾಡಲು ಕಾರಣ
   A) ಎರಡನೇ ಷಾ ಆಲಂನನ್ನು ಮರಾಠರು ದೆಹಲಿ ಸಿಂಹಾಸನದಲ್ಲಿ ಕುಳ್ಳಿರಿಸಿದರು.
   B) ರಘೋಬನಿಗೆ ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ದೊರೆಯಲಿಲ್ಲ.
   C) ರಘೋಬನು ಬ್ರಿಟಿಷರ ಬೆಂಬಲ ಕೋರಿದನು.
   D) ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು.
2. 42ನೇ ತಿದ್ದುಪಡಿ ಪ್ರಕಾರ ನಮ್ಮ ಸಂವಿಧಾನಕ್ಕೆ ಸೇರಿಸಲಾದ ಪದಗಳೆಂದರೆ
   A) ಸಮಾನತೆ ಮತ್ತು ಸಮಾಜವಾದ B) ಸಮಾಜವಾದ ಮತ್ತು ಗಣತಂತ್ರ
   C) ಸಾರ್ವಭೌಮ ಮತ್ತು ಪ್ರಜಾಸತ್ತಾತ್ಮಕ D) ಜಾತ್ಯತೀತ ಮತ್ತು ಸಮಾಜವಾದ
3. ಪ್ರಾದೇಶಿಕ ಸಮಾನತೆಯನ್ನು ತರಲು ಕರ್ನಾಟಕ ಸರ್ಕಾರ ನೇಮಿಸಿದ ಆಯೋಗ
   A) ಮಹಾಜನ್ ಆಯೋಗ B) ಡಾ. ಡಿ.ಎಂ.ನಂಜುಂಡಪ್ಪ ಆಯೋಗ
   C) ಡಾ.ಕಸ್ತೂರಿರಂಗನ್ ಆಯೋಗ D) ಫಜಲ್ ಅಲಿ ಆಯೋಗ
4. 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದವರು
   A) ಗಾಂಧೀಜಿ B) ಪಂಪ C) ಡಾ.ಬಿ.ಆರ್.ಅಂಬೇಡ್ಕರ್ D) ಪೊನ್ನ
5. ಚಿಪ್ಕೋ ಚಳುವಳಿ ನಡೆದ ರಾಜ್ಯ
   A) ಕರ್ನಾಟಕ B) ಕೇರಳ C) ಉತ್ತರ ಪ್ರದೇಶ D) ಗುಜರಾತ್
6. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದು
   A) ಗಂಗಾನಗರ – ಅತಿ ಹೆಚ್ಚು ಮಳೆ B) ರೂಯ್ಲಿ – ಅತಿ ಹೆಚ್ಚು ಉಷ್ಣಾಂಶ
   C) ಮಾಸಿನ್‌ರಾಮ್ – ಅತಿ ಕಡಿಮೆ ಮಳೆ D) ಕಾಫಿ ತುಂತುರು – ಬೇಸಿಗೆಕಾಲದ ಮಳೆ
7. ನೀತಿ ಆಯೋಗವು ಸ್ಥಾಪನೆಯಾದದ್ದು
   A) 1945, ಅಕ್ಟೋಬರ್ 24 B) 1962, ಮಾರ್ಚ್ 15
   C) 1949, ನವೆಂಬರ್ 26 D) 2015, ಜನವರಿ 1
8. 1962ರಲ್ಲಿ ಜಾನ್ ಎಫ್. ಕೆನಡಿ ಅಮೇರಿಕನ್ನರಿಗೆ ನೀಡಿದ ಗ್ರಾಹಕರ ಹಕ್ಕುಗಳು
   A) ಸಂರಕ್ಷಣೆ, ಮಾಹಿತಿ, ನಿವೇದನೆ, ಪರಿಹಾರ B) ಮಾಹಿತಿ, ನಿವೇದನೆ, ಪರಿಹಾರ, ಸಮಾನತೆ
   C) ಸಂರಕ್ಷಣೆ, ಮಾಹಿತಿ, ವಿಧೇಯತೆ, ಸಂಗ್ರಹಣೆ D) ಗುಣಮಟ್ಟ, ಸಂರಕ್ಷಣೆ, ಮಾಹಿತಿ, ನಿವೇದನೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 X 1 =8**

9. ಬಾಲ ಕಾರ್ಮಿಕ ಎಂದರೆ ಯಾರು?
10. ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ಪ್ರಾರಂಭಿಸಿದವರು ಯಾರು?
11. ಸರ್ದಾರ್ ವಲ್ಲಭಭಾಯ್ ಪಟೇಲರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಏಕೆ ಕರೆಯಲಾಗಿದೆ?
12. 1948ರ ಡಿಸೆಂಬರ್ 10 ಮಾನವ ಇತಿಹಾಸದಲ್ಲೇ ಅತ್ಯಂತ ಮಹತ್ವದ ದಿನ. ಏಕೆ?
13. ವಾಣಿಜ್ಯ ಬೇಸಾಯ ಎಂದರೇನು?
14. ಅಭ್ರಕವನ್ನು ಟೆಲಿಫೋನ್‌ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಏಕೆ?
15. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಯಾರು ಮಂಡಿಸುತ್ತಾರೆ?
16. ಭಾರತದಲ್ಲಿ ಬ್ಯಾಂಕುಗಳ ಬ್ಯಾಂಕು ಎಂದು ಯಾವುದನ್ನು ಕರೆಯುತ್ತಾರೆ?

SSSIF DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : 8 X 2 =16**

**17.** ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.

**18.** 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

**19.** ಲಾಭಕೋರತನಕ್ಕೆ ಕಾರಣಗಳಾವುವು?

**ಅಥವಾ**

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳೇನು?

**20.** ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು. ಹೇಗೆ?

**ಅಥವಾ**

ಬಾಲ್ಯ ವಿವಾಹ ಒಂದು ಅನಿಷ್ಟ ಪದ್ಧತಿ. ಹೇಗೆ?

**21.** ಮಳೆಕೊಯ್ಲು ಅಥವಾ ಮಳೆ ನೀರಿನ ಸಂಗ್ರಹಣೆ ಇಂದು ಕಡ್ಡಾಯವಾಗಿದೆ. ಏಕೆ?

**22.** ಕಡಲ ಕೊರೆತವನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸಿರಿ.

**23.** ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

**24.** ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡಲು ನೀಡಿರುವ ಯಾವುದಾದರೂ ನಾಲ್ಕು ಹಕ್ಕುಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : 9 X 3 =27**

**25.** ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು? ವಿವರಿಸಿ.

**ಅಥವಾ**

ಬ್ರಿಟಿಷರ ಕಂದಾಯ ಪದ್ಧತಿಯು ಭಾರತೀಯ ರೈತರ ಮೇಲೆ ಹೇಗೆ ದುಷ್ಪರಿಣಾಮ ಬೀರಿತು?

**26.** 4ನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

**27.** ಮುಸಲೋನಿಯ ಫ್ಯಾಸಿಸ್ಟ್‌ವಾದವು ಅತ್ಯಂತ ಕ್ರೂರವಾಗಿತ್ತು. ಸಮರ್ಥಿಸಿ.

**28.** ಭಾರತ ಮತ್ತು ಅಮೇರಿಕಾ ದೇಶಗಳ ನಡುವಿನ ಸಂಬಂಧವು ಸೌಹಾರ್ದಯುತವಾಗಿದೆ. ಸ್ಪಷ್ಟೀಕರಿಸಿ.

**29.** ನಿರುದ್ಯೋಗಕ್ಕೆ ಕಾರಣಗಳೇನು? ವಿವರಿಸಿ.

**30.** ಮಣ್ಣಿನ ಸವೆತಕ್ಕೆ ಕಾರಣಗಳೇನು?

**ಅಥವಾ**

ನಿತ್ಯ ಹರಿದ್ವರ್ಣದ ಅರಣ್ಯಗಳು ಮತ್ತು ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳ ನಡುವಿನ ವ್ಯತ್ಯಾಸಗಳೇನು?

**31.** ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಬಂದರುಗಳನ್ನು ಪಟ್ಟಿ ಮಾಡಿ.

**32.** ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿಯ ಪಾತ್ರವನ್ನು ವಿವರಿಸಿ.

**ಅಥವಾ**

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

**33.** ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು?

**ಅಥವಾ**

ಉದ್ಯಮಶೀಲತೆಯ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ : 4 X 4 =16**

**34.** ಭಾರತೀಯ ಸಮಾಜ ಸುಧಾರಣೆಗೆ ದಯಾನಂದ ಸರಸ್ವತಿಯವರು ಹೇಗೆ ಪ್ರಯತ್ನಿಸಿದರು?

**35.** 1857ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿರಿ.

**ಅಥವಾ**

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.

**36.** ಸಾಮಾನ್ಯ ಸಭೆಯ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸಿ.

**37.** ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5**

**a)** ಬಾಕ್ರಾನಂಗಲ್ **b)** ಭಾರತದ ಚಹದ ಬಂದರು

**b)** ಕರ್ಕಾಟಕ ಸಂಕ್ರಾಂತಿ ವೃತ್ತ **d)** ಚೆನ್ನೈ



SSTF DIGITAL GROUP

# ಮಾದರಿ ಪ್ರಶ್ನೆ ಪತ್ರಿಕೆ – 03

**ತರಗತಿ: 10** **2022-23** **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಅವಧಿ: 3ಗಂಟೆ 15ನಿಮಿಷ**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8 X 1 =8**

1. ಫ್ರಾನ್ಸಿಸ್ಕೊ ಡಿ ಆಲ್ಮೇಡ ನೀಲಿ ನೀರಿನ ನೀತಿಯನ್ನು ಜಾರಿಗೆ ತರಲು ಕಾರಣ
   A) ಭೂಮಿಯ ಮೇಲಿನ ಏಕಸ್ವಾಮ್ಯಕಾಗಿ ಸೈನ್ಯಶಕ್ತಿಯನ್ನು ಬಲಪಡಿಸುವುದು.
   B) ಸಮುದ್ರದ ಮೇಲಿನ ಏಕಸ್ವಾಮ್ಯಕಾಗಿ ನೌಕಾಶಕ್ತಿಯನ್ನು ಬಲಪಡಿಸುವುದು.
   C) ನೀಲಿ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ನೀಡುವುದು.
   D) ಸಮುದ್ರದ ನೀರು ನೀಲಿ ಎಂದು ಮನದಟ್ಟು ಮಾಡುವುದು.
2. ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು
   A) ಮುಸೋಲಿನಿ B) ಹಿಟ್ಲರ್ C) ಬಿ.ಚಾಮರಾಜ ಅರಸು D) ಸ್ಟ್ಯಾಲಿನ್
3. ಭಾರತ-ಚೀನಾ ದೇಶಗಳ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ.
   A) ಆರ್ಥಿಕ ತತ್ವ ಮತ್ತು ರಾಜಕೀಯ ತತ್ವ
   B) ಕಮ್ಯೂನಿಸ್ಟ್ ತತ್ವ ಮತ್ತು ಹಿಂದೂ ತತ್ವ
   C) ಪಂಚಶೀಲ ತತ್ವ ಮತ್ತು ಹಿಂದೂ-ಚೀನಿ ಭಾಯಿಭಾಯಿ ತತ್ವ
   D) ಪ್ರಜಾಪ್ರಭುತ್ವ ತತ್ವ ಮತ್ತು ಸಮಾನತೆಯ ತತ್ವ
4. ಸಂವಿಧಾನದ ಈ ವಿಧಿಯು ಅಸ್ಪೃಶ್ಯತೆ ಆಚರಣೆಯು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದೆ.
   A) 15ನೇ ವಿಧಿ B) 17ನೇ ವಿಧಿ C) 24ನೇ ವಿಧಿ D) 51ನೇ ವಿಧಿ
5. ಶಿಕ್ಷಣ ಹಕ್ಕು ಕಾಯ್ದೆಯು ಜಾರಿಗೆ ಬಂದ ವರ್ಷ
   A) 1961 B) 1976 C) 1986 D) 2009
6. ಡೆಕ್ಕನ್ ಟ್ರಾಪ್ ಎಂದರೆ
   A) ಕಪ್ಪು ಮಣ್ಣಿನ ಪ್ರದೇಶ B) ಕೆಂಪು ಮಣ್ಣಿನ ಪ್ರದೇಶ
   C) ಲ್ಯಾಟರೈಟ್ ಮಣ್ಣಿನ ಪ್ರದೇಶ D) ಮೆಕ್ಕಲು ಸಂಚಯನ ಮಣ್ಣಿನ ಪ್ರದೇಶ
7. ಪ್ರತ್ಯಕ್ಷ ತೆರಿಗೆಗೆ ಒಂದು ಉದಾಹರಣೆ
   A) ಕೇಂದ್ರ ಅಬಕಾರಿ ತೆರಿಗೆ B) ವರಮಾನ ತೆರಿಗೆ
   C) ವಿದೇಶಿ ಪ್ರವಾಸಿಗರ ಮೇಲಿನ ತೆರಿಗೆ D) ಸೇವಾ ತೆರಿಗೆ
8. ಮಾರುಕಟ್ಟೆಯ ರಾಜ
   A) ವ್ಯಾಪಾರಿ B) ಪೂರೈಕೆದಾರ C) ದಲ್ಲಾಳಿ D) ಗ್ರಾಹಕ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 X 1 =8**

9. ಭಾರತ ಮತ್ತು ಯುರೋಪ್ ನಡುವೆ ಹೊಸ ಜಲಮಾರ್ಗವನ್ನು ಕಂಡುಹಿಡಿದವನು ಯಾರು?
10. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್‌ನ್ನು ಏಕೆ ಸ್ಥಾಪಿಸಿದರು?
11. ನಿಶ್ಯಸ್ತ್ರೀಕರಣ ಎಂದರೇನು?
12. 'ಮಾನವ ಕುಲ ತಾನೊಂದೇ ವಲಂ' ಎಂದು ಹೇಳಿದವರು ಯಾರು?
13. ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು ಏನೆಂದು ಕರೆಯುತ್ತಾರೆ?
14. ಬೆಂಗಳೂರನ್ನು ಭಾರತದ 'ಸಿಲಿಕಾನ್ ಸಿಟಿ' ಎಂದು ಕರೆಯುತ್ತಾರೆ. ಏಕೆ?
15. ಭಾರತದ ಹಣಕಾಸು ವರ್ಷದ ಅವಧಿ ಯಾವುದು?
16. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ?

SSLC DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** **8 X 2 =16**

**17.** ಮೊದಲನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳೇನು?

**18.** ಹೈದರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನಗೊಂಡದ್ದು ಹೇಗೆ?

**19.** ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?

**ಅಥವಾ**

ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ ಐ.ಎಂ.ಎಫ್.ನ ಪಾತ್ರವನ್ನು ವಿವರಿಸಿ.

**20.** ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?

**ಅಥವಾ**

ದೊಂಬಿಯು ಒಂದು ಸಾಮಾಜ ಘಾತುಕ ಚಟುವಟಿಕೆ. ಏಕೆ?

**21.** ಭಾರತದ ವ್ಯವಸಾಯವು 'ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ'ವಾಗಿದೆ. ಚರ್ಚಿಸಿರಿ.

**22.** ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ವಿವರಿಸಿ.

**23.** ಸುಗ್ಗಿ ಪೂರ್ವ ತಂತ್ರಜ್ಞಾನವು ಸುಗ್ಗಿ ನಂತರದ ತಂತ್ರಜ್ಞಾನಕ್ಕಿಂತ ಹೇಗೆ ಭಿನ್ನವಾಗಿದೆ?

**24.** ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಅನುಕೂಲಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** **9 X 3 =27**

**25.** ಬ್ರಿಟಿಷರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?

**26.** ಚಿಕ್ಕದೇವರಾಜ ಒಡೆಯರ್ ಅವರ ಸಾಧನೆಗಳನ್ನು ವಿವರಿಸಿ.

**ಅಥವಾ**

ಜ್ಯೋತಿಭಾ ಫುಲೆಯವರ ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.

**27.** 1857ರ ಹೋರಾಟದ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು?

**28.** ಭದ್ರತಾ ಸಮಿತಿಯ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸಿ.

**29.** ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗು. ಸಮರ್ಥಿಸಿ.

**30.** ದೇಶದ ತ್ವರಿತಗತಿಯ ಆರ್ಥಿಕ ಬೆಳವಣಿಗೆಗೆ ರಸ್ತೆಗಳು ಪ್ರಮುಖ ಪಾತ್ರವಹಿಸುತ್ತವೆ. ಹೇಗೆ?

**31.** ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು?

**ಅಥವಾ**

ಭೂಕಂಪದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ.

**32.** ಭಾರತದ ಆರ್ಥಿಕ ಪ್ರಗತಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಮುಖ ಪಾತ್ರ ವಹಿಸಿವೆ. ಹೇಗೆ?

**ಅಥವಾ**

ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?

**33.** ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ವಿಧಾನಗಳಾವುವು?

**ಅಥವಾ**

ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** **4 X 4 =16**

**34.** ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

**35.** ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

**ಅಥವಾ**

ಎರಡನೇ ಮಹಾಯುದ್ಧಕ್ಕೆ ಕಾರಣಗಳಾವುವು?

**36.** ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**37.** ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ವಿವರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

**a)** ಮಲಬಾರ್ ತೀರ **b)** ಭದ್ರಾವತಿ

**c)** ಹಿರಾಕುಡ್ **d)** ಸುಭಾಷ್‌ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ



SSTF DIGITAL GROUP

# ಮಾದರಿ ಪ್ರಶ್ನೆ ಪತ್ರಿಕೆ – 04

**ತರಗತಿ: 10** **2022-23** **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಅವಧಿ: 3ಗಂಟೆ 15ನಿಮಿಷ**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8 X 1 =8**

**1.** ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು

A) ಲಾರ್ಡ್ ವೆಲ್ಲೆಸ್ಲಿ B) ಲಾರ್ಡ್ ಡಾಲ್‌ಹೌಸಿ

C) ಲಾರ್ಡ್ ಕಾರ್ನ್‌ವಾಲೀಸ್ D) ವಾರನ್ ಹೇಸ್ಟಿಂಗ್ಸ್

**2.** ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ವಿರೋಧಿಸಲು ಕಾರಣ

A) ರಾಯಲ್ ಎನ್‌ಫೀಲ್ಡ್ ಬಂದೂಕುಗಳು ಬಂದೂಕುಗಳು ಅತ್ಯಂತ ಭಾರವಾಗಿದ್ದವು.

B) ಬಂದೂಕುಗಳ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು.

C) ಬಂದೂಕುಗಳನ್ನು ಉಪಯೋಗಿಸುವ ಸಾಮರ್ಥ್ಯ ಸೈನಿಕರಲ್ಲಿರಲಿಲ್ಲ.

D) ಬ್ರಿಟಿಷರು ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದರು.

**3.** ಅಂತರರಾಷ್ಟ್ರೀಯ ನ್ಯಾಯಾಲಯವಿರುವ ಸ್ಥಳ

A) ನ್ಯೂಯಾರ್ಕ್ B) ಜೀನೇವಾ C) ಪ್ಯಾರೀಸ್ D) ಹೇಗ್

**4.** 1976ರ ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತರಲು ಕಾರಣ

A) ಶ್ರಮ ವಿಭಜನೆಗೆ ಹೆಚ್ಚು ಒತ್ತು ನೀಡಲು B) ಕೆಲಸಗಾರರ ವಿಶೇಷ ಪರಿಣಿತಿಯನ್ನು ಉತ್ತೇಜಿಸಲು

C) ದುಡಿಮೆಯಲ್ಲಿನ ತಾರತಮ್ಯ ನಿವಾರಿಸಲು D) ಕೂಲಿ ಹಂಚಿಕೆಯಲ್ಲಿ ಸಮಾನತೆಯನ್ನು ತರಲು

**5.** ಮಕ್ಕಳ ಸಹಾಯವಾಣಿ ಸಂಖ್ಯೆ

A) 1098 B) 1089 C) 1908 D) 1980

**6.** ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿದೆ. ಏಕೆಂದರೆ

A) ಭಾರತದ ಶೇ. 40ರಷ್ಟು ಜನರು ಅಲ್ಲಿ ವಾಸಿಸುತ್ತಾರೆ.

B) ಅತಿ ಹೆಚ್ಚು ಜನರು ಸಕ್ಕರೆಯನ್ನು ಉಪಯೋಗಿಸುತ್ತಾರೆ.

C) ವರ್ಷಪೂರ್ತಿ ನೀರಾವರಿ ಸೌಲಭ್ಯವನ್ನು ಹೊಂದಿದೆ.

D) ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ.

**7.** ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸದಸ್ಯರುಗಳೆಂದರೆ

A) ರಾಜ್ಯ ಸರ್ಕಾರಗಳ ಕಾರ್ಯದರ್ಶಿಗಳು B) ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು

C) ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಮಂತ್ರಿಗಳು D) ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲ

**8.** ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದು ಒಂದು ಕೋಟಿಯೊಳಗಿದ್ದರೆ ದೂರು ನೀಡಬೇಕಾದ ಗ್ರಾಹಕ ವೇದಿಕೆ

A) ತಾಲ್ಲೂಕು ವೇದಿಕೆ B) ಜಿಲ್ಲಾ ವೇದಿಕೆ C) ರಾಜ್ಯ ಆಯೋಗ D) ರಾಷ್ಟ್ರೀಯ ಆಯೋಗ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 X 1 =8**

**9.** ಮರಾಠರ ಕೊನೆಯ ಪೇಶ್ವೆ ಯಾರು?

**10.** 1909ರ ಮಿಂಟೋ–ಮಾರ್ಲೆ ಸುಧಾರಣೆಗಳು ದೇಶದ ವಿಭಜನೆಗೆ ಹೇಗೆ ಕಾರಣವಾದವು?

**11.** ದತ್ತಿ ಸಮಿತಿಯ ಕಾರ್ಯಕ್ಷೇತ್ರವು ಕಡಿಮೆಯಾಗುತ್ತಿದೆ. ಏಕೆ?

**12.** ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

**13.** ಬೇಸಿಗೆ ಕಾಲದಲ್ಲಿ ಉತ್ತರ ಭಾರತದ ಉಷ್ಣಾಂಶ ಹೆಚ್ಚಾಗಿರಲು ಕಾರಣವೇನು?

**14.** ದಾಮೋದರ ನದಿಯನ್ನು ಪಶ್ಚಿಮ ಬಂಗಾಳದ 'ಕಣ್ಣೀರಿನ ನದಿ' ಎಂದು ಏಕೆ ಕರೆಯುತ್ತಾರೆ?

**15.** ಡಾ.ಎಂ.ಎಸ್.ಸ್ವಾಮಿನಾಥನ್‌ರವರನ್ನು 'ಭಾರತದ ಹಸಿರು ಕ್ರಾಂತಿಯ ಪಿತಾಮಹ' ಎಂದು ಕರೆಯುತ್ತಾರೆ. ಏಕೆ?

**16.** ಉದ್ಯಮಶೀಲತೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಹೇಗೆ?



SS DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** **8 X 2 =16**

**17.** ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು. ಹೇಗೆ?

**18.** ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತದ ದೇಶೀಯ ಸಂಸ್ಥಾನಗಳನ್ನು ವಿಲಿನಗೊಳಿಸಿ ಯಶಸ್ವಿಯಾದದ್ದು ಹೇಗೆ?

**19.** ನಿಶ್ಯಸ್ತ್ರೀಕರಣವು ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ. ಏಕೆ?

**ಅಥವಾ**

ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳನ್ನು ಪಟ್ಟಿ ಮಾಡಿರಿ.

**20.** ನಿರುದ್ಯೋಗವು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ಹೇಗೆ?

**ಅಥವಾ**

ಬಾಲಕಾರ್ಮಿಕತೆಯ ನಿರ್ಮೂಲನ ಕ್ರಮಗಳನ್ನು ವಿವರಿಸಿ.

**21.** ಪೂರ್ವ ಮತ್ತು ಪಶ್ಚಿಮ ಘಟ್ಟಗಳ ನಡುವಿನ ವ್ಯತ್ಯಾಸಗಳೇನು?

**22.** ರಸ್ತೆ ಸಾರಿಗೆಯಲ್ಲಿ ಕಂಡುಬರುವ ತೊಡಕುಗಳನ್ನು ವಿವರಿಸಿ.

**23.** ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಗಳ ನಡುವಿನ ವ್ಯತ್ಯಾಸಗಳೇನು?

**24.** ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** **9 X 3 =27**

**25.** ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.

**ಅಥವಾ**

ಮುಸ್ಲಿಂ ಸಮಾಜ ಸುಧಾರಣೆಯಲ್ಲಿ ಸರ್ ಸಯ್ಯದ್ ಅಹಮ್ಮದ್ ಖಾನ್‌ರವರ ಪಾತ್ರ ಮಹತ್ತರವಾದುದು. ಸಮರ್ಥಿಸಿ.

**26.** 1857ರ ದಂಗೆಗೆ ಕಾರಣವಾದ ಆಡಳಿತಾತ್ಮಕ ಮತ್ತು ಸೈನಿಕ ಕಾರಣಗಳನ್ನು ವಿವರಿಸಿ.

**27.** ನೆಹರೂರವರು ಪ್ರಧಾನಮಂತ್ರಿಯಾಗಿ ಭಾರತದ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನು ವಿವರಿಸಿ.

**28.** ಭಾರತ ಮತ್ತು ರಷ್ಯಾ ದೇಶಗಳು ಉತ್ತಮ ಬಾಂಧವ್ಯವನ್ನು ಹೊಂದಿವೆ. ಸಮರ್ಥಿಸಿ.

**29.** ಮಹಿಳಾ ಸ್ವಸಹಾಯ ಸಮೂಹಗಳ ಮಹತ್ವವನ್ನು ವಿವರಿಸಿ.

**30.** ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಹೇಗೆ?

**ಅಥವಾ**

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳಾವುವು? ವಿವರಿಸಿ.

**31.** ಭಾರತದ ಭೂಬಳಕೆಯ ಪ್ರಕಾರಗಳಾವುವು?

**32.** ಗಾಂಧೀಜಿಯವರ ಗ್ರಾಮರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ವಿವರಿಸಿ.

**ಅಥವಾ**

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

**33.** ಬ್ಯಾಂಕಿನ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.

**ಅಥವಾ**

ಉದ್ಯಮಿಯ ಕಾರ್ಯಗಳನ್ನು ಪಟ್ಟಿ ಮಾಡಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** **4 X 4 =16**

**34.** ಕಿತ್ತೂರಿನ ಬಂಡಾಯದಲ್ಲಿ ವೀರರಾಣಿ ಚೆನ್ನಮ್ಮಳ ಪಾತ್ರವನ್ನು ವಿವರಿಸಿ.

**35.** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

**ಅಥವಾ**

ಎರಡನೇ ಮಹಾಯುದ್ಧದ ಪರಿಣಾಮಗಳೇನು?

**36.** ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?

**37.** ಭೂಕುಸಿತಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

**a)** $82\ 1/2^0$ ಪೂರ್ವ ರೇಖಾಂಶ **b)** ನವ ಮಂಗಳೂರು

**c)** ಪಂಪಸಾಗರ **d)** ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ



SSLC DIGITAL GROUP

## ಮಾದರಿ ಪ್ರಶ್ನೆ ಪತ್ರಿಕೆ – 05

**ತರಗತಿ: 10** | **2022-23** | **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** | **ಅವಧಿ: 3ಗಂಟೆ 15ನಿಮಿಷ**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8 X 1 =8**

**1.** ಪೇಶ್ವೆ 2ನೇ ಬಾಜಿರಾವ್ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಒಪ್ಪಂದ

A) ನಿರಂತರ ಮೈತ್ರಿ ಒಪ್ಪಂದ B) ಸಾಲ್ಬಾಯ್ ಒಪ್ಪಂದ

C) ಲಾಹೋರ್ ಒಪ್ಪಂದ D) ಬೆಸ್ಸಿನ್ ಒಪ್ಪಂದ

**2.** ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣ

A) ಆಸ್ಟ್ರೀಯಾ ರಾಜಕುಮಾರನ ಹತ್ಯೆ B) ಪೋಲೆಂಡ್ ಮೇಲೆ ಜರ್ಮನಿಯ ದಾಳಿ

C) ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳು D) 1930ರ ಆರ್ಥಿಕ ಮಹಾಕುಸಿತ

**3.** ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು

A) ಅಮೇರಿಕ, ರಷ್ಯ, ಬ್ರಿಟನ್, ಭಾರತ, ಚೀನಾ B) ಬ್ರಿಟನ್, ಫ್ರಾನ್ಸ್, ಅಮೇರಿಕ, ಬ್ರೆಜಿಲ್, ರಷ್ಯ

C) ಬ್ರಿಟನ್, ರಷ್ಯ, ಅಮೇರಿಕ, ಜಪಾನ್, ಜರ್ಮನಿ D) ರಷ್ಯ, ಅಮೇರಿಕ, ಬ್ರಿಟನ್, ಫ್ರಾನ್ಸ್, ಚೀನಾ

**4.** 1976ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ

A) ಅಸ್ಪೃಶ್ಯತಾ ನಿರ್ಮೂಲನಾ ಕಾಯ್ದೆ B) ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ

C) ಬಾಲಾಪರಾಧ ನಿಷೇಧ ಕಾಯ್ದೆ D) ನಾಗರೀಕರ ಸಮಾನ ಹಕ್ಕು ಕಾಯ್ದೆ

**5.** ಶ್ರಮ ವಿಭಜನೆಯು ಕಾರಣವಾಗುವುದು

A) ದುಡಿಮೆಯ ತಾರತಮ್ಯಕ್ಕೆ B) ನಿರುದ್ಯೋಗಕ್ಕೆ

C) ವಿಶೇಷ ಪರಿಣತಿಗೆ D) ಸಾಮಾಜಿಕ ನ್ಯಾಯಕ್ಕೆ

**6.** ಬಾಕ್ಸೈಟ್‌ನ್ನು 20ನೇ ಶತಮಾನದ ಅದ್ಭುತ ಲೋಹ ಎಂದು ಕರೆಯಲು ಕಾರಣ

A) ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದರಿಂದ

B) ಬಹು ಉಪಯೋಗಿ ಖನಿಜವಾಗಿರುವುದರಿಂದ

C) ಹಲವಾರು ಬಗೆಯ ಮಿಶ್ರಣಗಳಿಂದ ಕೂಡಿರುವುದರಿಂದ

D) ಯುದ್ಧ ಮತ್ತು ಶಾಂತಿ ಕಾಲಗಳೆರಡರಲ್ಲೂ ಅಮೂಲ್ಯವಾದುದರಿಂದ

**7.** ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸರ್ಕಾರಗಳು ಆರ್ಥಿಕ ಅಭಿವೃದ್ಧಿ ಸಾಧಿಸಲು ಮಂಡಿಸುವ ಆಯ-ವ್ಯಯ

A) ಸಮತೋಲನ ಆಯ-ವ್ಯಯ B) ಉಳಿತಾಯ ಆಯ-ವ್ಯಯ

C) ಕೊರತೆಯ ಆಯ-ವ್ಯಯ D) ಸಾಲೇತರ ಆಯ-ವ್ಯಯ

**8.** ಪ್ರತಿ ವರ್ಷ ವಿಶ್ವ ಗ್ರಾಹಕ ದಿನಾಚರಣೆಯನ್ನು ಆಚರಿಸುವುದು

A) ಡಿಸೆಂಬರ್ 10 ರಂದು B) ಮಾರ್ಚ್ 15 ರಂದು C) ಅಕ್ಟೋಬರ್ 24 ರಂದು D) ಜನವರಿ 26 ರಂದು

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 X 1 =8**

**9.** ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್ ಯಾರು?

**10.** 1909ರಲ್ಲಿ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ರಚಿಸಲು ಕಾರಣವೇನು?

**11.** ಕರ್ನಾಟಕ ಸರ್ಕಾರವು ಲೋಕಾಯುಕ್ತ ಸಂಸ್ಥೆಯನ್ನು ಏಕೆ ಸ್ಥಾಪಿಸಿದೆ?

**12.** 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಯನ್ನು ಯಾರಿಗೆ ವಹಿಸಿದೆ?

**13.** ನಮ್ಮ ಜಲಾಶಯಗಳ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಏಕೆ?

**14.** ಭಾರತದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿರುವ ಅರಣ್ಯ ಯಾವುದು?

**15.** ಹಸಿರು ಕ್ರಾಂತಿ ಎಂದರೇನು?

**16.** ಟೆಲಿಷಾಪಿಂಗ್ ಜನರಿಗೆ ಹೇಗೆ ವರದಾನವಾಗಿದೆ?



SSLC DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** **8 X 2 =16**

**17.** 1857ರ ದಂಗೆಗೆ ತತ್‍ಕ್ಷಣದ ಕಾರಣಗಳನ್ನು ವಿವರಿಸಿ.

**18.** ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?

**19.** ಅನ್ಯರಾಷ್ಟ್ರಗಳೊಂದಿಗೆ ಭಾರತಕ್ಕೆ ಉತ್ತಮ ಬಾಂಧವ್ಯ ಅವಶ್ಯಕ. ಸಮರ್ಥಿಸಿ.

**ಅಥವಾ**

ಮಾನವ ಹಕ್ಕುಗಳ ಪ್ರತಿಪಾದನೆಯನ್ನು ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಿದೆ. ಸ್ಪಷ್ಟೀಕರಿಸಿ.

**20.** ಭಾರತದ ಯಾವುದಾದರೂ ನಾಲ್ಕು ಪ್ರಮುಖ ಪರಿಸರ ಸಂರಕ್ಷಣೆ ಚಳುವಳಿಗಳನ್ನು ಹೆಸರಿಸಿ.

**ಅಥವಾ**

ಭಾರತದ ಯಾವುದಾದರೂ ನಾಲ್ಕು ಸಾಮಾಜಿಕ ಸವಾಲುಗಳನ್ನು ತಿಳಿಸಿ.

**21.** ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಹೊಂದಿದೆ. ಹೇಗೆ?

**22.** ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದ ಮೇಲಿನ ಪರಿಣಾಮಗಳೇನು?

**23.** ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ. ವಿಮರ್ಶಿಸಿ.

**24.** ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆ ನಡುವಿನ ವ್ಯತ್ಯಾಸಗಳೇನು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** **9 X 3 =27**

**25.** ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

**26.** ಹಲಗಲಿ ಬೇಡರ ದಂಗೆಯನ್ನು ವಿವರಿಸಿ.

**ಅಥವಾ**

'ಭಾರತೀಯ ಸಮಾಜಕ್ಕೆ ಅನಿಬೆಸೆಂಟರು ನೀಡಿರುವ ಕೊಡುಗೆಗಳನ್ನು ವಿವರಿಸಿ.

**27.** ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.

**28.** ಜನಸಂಖ್ಯಾ ಸ್ಫೋಟವು ಹಲವಾರು ಸಮಸ್ಯೆಗಳ ಉಗಮಕ್ಕೆ ಹೇಗೆ ಕಾರಣವಾಗಿದೆ?

**29.** ಬಾಲ ಕಾರ್ಮಿಕತೆಯು ಹಲವಾರು ದುಷ್ಪರಿಣಾಮಗಳನ್ನು ಉಂಟುಮಾಡುತ್ತದೆ. ಸಮರ್ಥಿಸಿ.

**30.** ಭೂಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

**ಅಥವಾ**

ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿ.ಐ.ಎಸ್.) ಉಪಯೋಗಗಳನ್ನು ತಿಳಿಸಿರಿ.

**31.** ಭೂಕಂಪದ ಪರಿಣಾಮಗಳನ್ನು ಪಟ್ಟಿ ಮಾಡಿರಿ.

**32.** ಮಹಿಳಾಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವೇನು?

**ಅಥವಾ**

ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.

**33.** ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?

**ಅಥವಾ**

ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವನ್ನು ವಿವರಿಸಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** **4 X 4 =16**

**34.** ಖಾಯಂ ಜಮೀನ್ದಾರಿ ಪದ್ಧತಿಯು ರೈತವಾರಿ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ?

**ಅಥವಾ**

ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು. ಹೇಗೆ?

**35.** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

**36.** ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಾಧನೆಗಳನ್ನು ಪಟ್ಟಿ ಮಾಡಿ.

**37.** ಅರಣ್ಯ ಸಂರಕ್ಷಣೆಯ ವಿಧಾನಗಳನ್ನು ವಿವರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

**a)** ಕೊಂಕಣ ತೀರ **b)** ಹೈದರಾಬಾದ್

**c)** ಕಾಂಡ್ಲಾ **d)** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ



SSTF DIGITAL GROUP



# ವೈಶಿಷ್ಟ್ಯಗಳು

* ಇದು 5 ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿದೆ.

* ಕೆ.ಎಸ್.ಇ.ಎ.ಬಿ.ಯ ಪ್ರಶ್ನೆ ಪತ್ರಿಕೆಯ ಸ್ವರೂಪಕ್ಕನುಗುಣವಾಗಿ ರಚಿಸಲಾಗಿದೆ.

* ಪ್ರಶ್ನೆಪತ್ರಿಕೆ ರಚನೆಯ ಎಲ್ಲ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ.

* ವಾರ್ಷಿಕ ಪರೀಕ್ಷಾ ದೃಷ್ಟಿಯಿಂದ ಅತಿ ಮುಖ್ಯವೆನಿಸಿದ ಪ್ರಶ್ನೆಗಳನ್ನು ಹೊಂದಿದೆ.

* ವಿದ್ಯಾರ್ಥಿಗಳು ಇವುಗಳಿಗೆ ಉತ್ತರಿಸುವುದರಿಂದ ಪರೀಕ್ಷಾ ಭಯ ನಿವಾರಣೆಯಾಗಿ ಆತ್ಮವಿಶ್ವಾಸ ಹೆಚ್ಚುವುದು.

* ಅತಿ ಹೆಚ್ಚು ಅಂಕ ಗಳಿಸಲು ಪ್ರೇರಣೆ ನೀಡುವುದು.

ಮಹಾದೇವಪ್ಪ ಕುಂದರಗಿ
ಸರ್ಕಾರಿ ಪ್ರೌಢ ಶಾಲೆ ಆವತಿ, ಚಿಕ್ಕಮಗಳೂರು

SS STF KARNATAKA DIGITAL GROUP